ಸಾಗಿಸುವುದು?' ಸಂಜಯ್ ಕೇಳಿದ.

ಶೆಟ್ಟರು ಸಂಜಯ್ ಕಡೆಗೆ ತಿರುಗಿ, 'ಕಾರಂತರೇ, ನಿಮಗೆ ನಮ್ಮ ಊರಿನ ಯುವಕರ ಶಕ್ತಿ ಮತ್ತು ಚೈತನ್ಯ ಗೊತ್ತಿಲ್ಲ. ನಾಳೆ ಏನಾಗುತ್ತದೆ ನೋಡಿ' ಅಂದರು.

ಎಲ್ಲರೂ ಸೀತಾಪುರಕ್ಕೆ ಬಂದರು. ಶೆಟ್ಟರು ಆನಂದಣ್ಣ ತಂತಮ್ಮ ಮನೆಗೆ ಹೋದರು. ಸಂಜಯ್ ಪ್ರಭಾಕರನನ್ನು ಶಾಸ್ತ್ರಿಗಳ ಮನೆಗೆ ಕರ್ಕೊಂಡು ಹೋದ.

ಅಲ್ಲಿ ಸಂಜಯ್ ವಿಡಿಯೊ ಶೂಟಿಂಗ್ ಶುರು ಮಾಡಿದ. ಪ್ರಭಾಕರ ಇದನ್ನೆಲ್ಲಾ ಕ್ಯಾಮೆರಾದಲ್ಲಿ ಸೆರೆ ಹಿಡಿಯಲು ಶುರುಮಾಡಿದ.

ಸಂಜಯ್ ತಾನು ಸೀತಾಪುರದಲ್ಲಿ ತರಲಿರುವ ಪರಿವರ್ತನೆ ಬಗ್ಗೆ ಮಾತಾಡಿದ. ಮುಂದಿನ ಎರಡು ತಿಂಗಳ ಕಾರ್ಯಕ್ರಮ ವಿವರಿಸಿದ.

'ವೀಕ್ಷಕರೇ, ಹೊರಪ್ರಪಂಚದ ಏನೂ ಪರಿಚಯ ಇಲ್ಲದ ಬಹಳ ಬಡತನದಲ್ಲಿ ಜೀವನ ಮಾಡಿಕೊಂಡಿರುವ ಜನರಿರುವ ಒಂದು ಹಳ್ಳಿಯನ್ನು ಎರಡು ತಿಂಗಳಲ್ಲಿ ಕೇವಲ ಇಂಟರ್ನೆಟ್ ಮತ್ತು ಸೋಶಿಯಲ್ ಮೀಡಿಯಾದ ಸಹಾಯದಿಂದ ಸಂಪೂರ್ಣ ಪರಿವರ್ತನೆಮಾಡಲು ಸಾಧ್ಯವೇ? ಪ್ರತೀ ಮನೆಯವರ ಆದಾಯವನ್ನು ದ್ವಿಗುಣಗೊಳಿಸಿ ಅವರಿಗೆ ಆಧುನಿಕ ಜಗತ್ತಿನ ಸುಖ ಸಂಪತ್ತಿನ ಲೋಕಕ್ಕೆ ಕರೆತರಲು ಸಾಧ್ಯವೇ? ಇದನ್ನು ನೀವೆಂದಿಗೂ ಊಹಿಸಲಾರಿರಿ. ಆದರೆ ಇದನ್ನು ನಾನು ಮಾಡಿ ತೋರಿಸಲಿದ್ದೇನೆ. ಇದು ನಮ್ಮ ಸರಕಾರಕ್ಕೂ ಸಮಾಜಕ್ಕೂ ಒಂದು ಮಾದರಿ.'

'ನಮಸ್ಕಾರ, ನಾನು ನಿಮ್ಮ ಸಂಜಯ್ ಕಾರಂತ. ನಾನು ಸೋಶಿಯಲ್ ಇಂಟರ್‌ಪ್ರೆನೂರ್, ಸೋಶಿಯಲ್ ಮೀಡಿಯಾ ಸ್ಟಾರ್. ಈ ಹಿಂದೆ ಬ್ರೆಜಿಲ್ ದೇಶದಲ್ಲಿ ಆರು ತಿಂಗಳು ಇದ್ದು ಒಂದು ಹಳ್ಳಿಯನ್ನು ಅಭಿವೃದ್ಧಿ ಮಾಡಿದ್ದೆ. ಆಮೇಲೆ ಆಫ್ರಿಕಾದಲ್ಲಿ ಮೂರು ತಿಂಗಳಿದ್ದು ಇನ್ನೊಂದು ಹಳ್ಳಿಯನ್ನು ಪರಿವರ್ತಿಸಿದ್ದೆ. ಈಗ ಭಾರತದ ಸರದಿ. ಇದು ಬುದ್ಧಿವಂತರ ದೇಶ. ನನ್ನ ಅನುಭವದಲ್ಲಿ ಕೇವಲ ಎರಡು ತಿಂಗಳಲ್ಲಿ ಇಲ್ಲಿ ಪರಿವರ್ತನೆ ತರಬಹುದು. ಇದು ನನ್ನ ನಂಬಿಕೆ. ನೀವು ನನ್ನೊಂದಿಗಿದ್ದರೆ ಮಾತ್ರ ಇದು ಸಾಧ್ಯ.

ಇಂದಿನಿಂದ ಇನ್ನು ಮೂವತ್ತು ದಿನ ನಾನು ನಿಮಗೆ ಸೀತಾಪುರದ ಅಭಿವೃದ್ಧಿಯ ಕಥೆ ತೋರಿಸುತ್ತೇನೆ. ಪ್ರತೀ ದಿನ ಇಲ್ಲಿ ಏನು ಆಗುತ್ತಿದೆ ಎಂದು ನೀವೂ ನೋಡುತ್ತೀರಿ. ಹಂತಹಂತವಾಗಿ ನಿಮಗೆ ಹೇಗೆ ಒಂದು ಹಳ್ಳಿ ಬದಲಾಗುತ್ತಿದೆ ಎಂದು ಗೊತ್ತಾಗ್ತದೆ. ನೀವು ಈ ಹಳ್ಳಿಯಲ್ಲಿ ಯಾರು ಹೆಚ್ಚು ಹಣ ಮಾಡ್ತಾರೆ ಅಂತ ಪಂಥ ಹೂಡಬಹುದು. ಈ ಹಳ್ಳಿಯಲ್ಲಿ ನಿಮಗೆ ಯಾರಾದರೂ ಇಷ್ಟವಾದರೆ ಅವರ ಬಿಸಿನೆಸ್ ಮೇಲೆ ನೀವು ಬಂಡವಾಳ ಹಾಕಬಹುದು. ನಿಮ್ಮಲ್ಲಿ ಕೆಲವರಿಗೆ ಇಲ್ಲಿಗೆ ಬಂದು ಸೀತಾಪುರವನ್ನು ನೋಡುವ ಮನಸ್ಸಿದ್ದರೆ ಅದಕ್ಕೂ ಅವಕಾಶ ಇರುತ್ತದೆ, ಈ ಶೋನಲ್ಲಿ ನೀವೂ ನನ್ನೊಂದಿಗೆ ಇರುವ ಅವಕಾಶ ಸಿಕ್ಕುತ್ತದೆ' ಅಂದ.

ಇದರೊಂದಿಗೆ ನಾನು 'ಒಂದು ಹಳ್ಳಿ, ಎರಡು ತಿಂಗಳು' ಎಂಬ ಈ ಕಾರ್ಯಕ್ರಮವನ್ನು ಶುರು ಮಾಡುತ್ತಿದ್ದೇನೆ ಎಂದು ಘೋಷಿಸಿದ.

ಪ್ರಭಾಕರ ಬಹಳ ಏಕಾಗ್ರತೆಯಿಂದ ಸಂಜಯನ ಈ ಪೀಠಿಕೆಯನ್ನು ಕ್ಯಾಮೆರಾದಲ್ಲಿ ಸೆರೆಹಿಡಿದ.

ಸಂಜೆ ಎಂದಿನಂತೆ ಆಶಾ ಮತ್ತು ಸಂಜಯ್ ಗುಡ್ಡಕ್ಕೆ ಹೋದರು. ದಾರಿಯಲ್ಲಿ ಸಂಜಯ್ ತನ್ನ ನಿಯೋ ಮ್ಯಾನೇಜರ್ ಜೊತೆಗಿನ ಮಾತುಕತೆ ಮತ್ತು ಮುಂದಿನ ಪ್ಲಾನ್ ಹೇಳಿದ. ಆಶಾಳಿಗೆ ಒಳಗೊಳಗೇ ಸ್ವಲ್ಪ ಆತಂಕ.

ಗುಡ್ಡದ ತುದಿ ತಲುಪಿದ ನಂತರ ಸಂಜಯ್ ತನ್ನ ಲ್ಯಾಪ್‌ಟಾಪ್ ಬಿಚ್ಚಿದ. ಎಂದಿನಂತೆ ಫೋನ್ ಸಂಭಾಷಣೆ ಮತ್ತು ಲ್ಯಾಪ್‌ಟಾಪ್ ಕೆಲಸ ಆಯಿತು. ಪ್ರಭಾಕರ ರೆಕಾರ್ಡ್ ಮಾಡಿದ ಎಲ್ಲಾ ವಿಡಿಯೊಗಳನ್ನು ಅಪ್‌ಲೋಡ್ ಮಾಡಿದ. ಆಮೇಲೆ ಇಬ್ಬರೂ ಮನೆಗೆ ವಾಪಸು ಬಂದರು.

ಹಿಂದೆ ಬರುವಾಗ ಸಂಜಯ್ 'ಆಶಾ, ಇನ್ನೇನು ಎರಡು ಮೂರು ದಿವಸ. ನಂತರ ಗುಡ್ಡಕ್ಕೆ ಹೋಗಬೇಕಾಗಿಲ್ಲ. ಮನೆಯಿಂದಲೇ ಇಂಟರ್ನೆಟ್ ಸಿಕ್ಕುತ್ತದೆ' ಅಂದ. ಆಶಾಳಿಗೆ ಏನೋ ಕಳೆದುಕೊಂಡಂತಾಯಿತು.

ಮರುದಿನ ಬೆಳಗ್ಗೆ ಆನಂದಣ್ಣ ಶಾಸ್ತ್ರಿಗಳ ಮನೆಗೆ ಬಂದವರು ಸಂಜಯನನ್ನು ಕರಕೊಂಡು ಗುಡ್ಡ ದಾಟಿ ಸವಣೂರಿನ ಕಡೆಗೆ ಹೊರಟರು. ದಾರಿಯಲ್ಲಿ ಪೊರ್ಬುಗಳ ಮನೆ ಹತ್ತಿರ ಬರುವಾಗ ಅಲ್ಲಿ ಸುಮಾರು ಐವತ್ತು ಯುವಕರು ನಿಂತಿದ್ದರು. ಆನಂದಣ್ಣ ಅವರಲ್ಲಿ ವಿಚಾರಿಸಿದಾಗ ಅವರು ಶೆಟ್ಟರ ಕರೆಯ ಮೇಲಿಗೆ ಅಲ್ಲಿಗೆ ಬಂದು ಕಾಯುತ್ತಿರುವುದಾಗಿ ಹೇಳಿದರು.

ಅದೇ ಹೊತ್ತಿಗೆ ಸವಣೂರಿನ ಕಡೆಯಿಂದ ಒಂದು ಕಾರು ಮತ್ತು ಲಾರಿ ಬಂದವು. ಲಾರಿಯ ಮೇಲೆ ಕಬ್ಬಿಣದ ದೊಡ್ಡ ಕಂಬಗಳು ಇದ್ದವು. ಪೊರ್ಬುಗಳ ಮನೆ ಸಮೀಪ ಕಾರು ನಿಂತಿತು. ಕಾರಿನಿಂದ ಶೆಟ್ಟರೂ ನಿಯೋದ ಮ್ಯಾನೇಜರರೂ ಇಳಿದರು. ಅವರನ್ನು ನೋಡಿ ಆನಂದಣ್ಣ ತನ್ನ ಶಾಲನ್ನು ಸರಿಪಡಿಸುತ್ತಾ 'ನಮಸ್ಕಾರ' ಎನ್ನುತ್ತಾ ಅವರ ಕಡೆ ನಡೆದರು. ಸಂಜಯ್ ಅವರನ್ನು ಅನುಸರಿಸಿದ.

ಮ್ಯಾನೇಜರ್ ಆನಂದಣ್ಣ ಮತ್ತು ಸಂಜಯನನ್ನು ನೋಡಿ ನಮಸ್ಕರಿಸಿದರು. 'ಕೊನೆಗೂ ನಿಮ್ಮ ಊರಿಗೆ ಬಂದೆವು ನೋಡಿ' ಅಂದರು ಆಮೇಲೆ. ಕಾರಿನ ಹಿಂದೆ ದೂಳು ಮುಸುಕಿದ ಲಾರಿಯಲ್ಲಿ ದೊಡ್ಡ ದೊಡ್ಡ ಕಬ್ಬಿಣದ ಕಂಬಗಳು ಇದ್ದವು. ಹಾಗೆ ಒಂದಷ್ಟು ಜನರು ಲಾರಿಯ ಹಿಂಭಾಗದಿಂದ ಇಳಿದರು.

ಶೆಟ್ಟರು ಸಂಜಯನನ್ನು ನೋಡಿ, 'ನಮಸ್ಕಾರ ಕಾರಂತರೇ, ಈಗ ಸೀತಾಪುರದ ಶಕ್ತಿ ಗೊತ್ತಾಗ್ತದೆ ನೋಡಿ' ಎನ್ನುತ್ತಾ ಯುವಕರ ಕಡೆಗೆ ಮುಖ ಮಾಡಿ, 'ಬನ್ನಿ, ಬನ್ನಿ. ಈಗ ಈ ಲಾರಿಯಲ್ಲಿ ಇರುವ ಕಬ್ಬಿಣದ ವಸ್ತುಗಳನ್ನು ಗುಡ್ಡದ ಮೇಲೆ ಕೊಂಡೋಗ್ಬೇಕು. ನಿಮ್ಮಲ್ಲಿ ಯಾರು ಬುದ್ಧಿವಂತರಿದ್ದೀರಿ ನೋಡುವ... ಹೇಗೆ ಇದನ್ನು ಕೊಂಡೋಗುವುದು ಅಂತ ಪ್ಲಾನ್ ಮಾಡಿ ಹೇಳಿ' ಅಂದರು.

ಸಂಜಯನಿಗೆ ಇದು ಹುಚ್ಚು ಆಲೋಚನೆಯಾಗಿ ಕಂಡಿತು. ನಡೆದುಕೊಂಡು ಹತ್ತಲಾಗದ ಈ ಗುಡ್ಡಕ್ಕೆ ಹೇಗೆ ಈ ದೊಡ್ಡ ಕಬ್ಬಿಣದ ಕಂಬಗಳನ್ನು ಕೊಂಡೊಯ್ಯುವುದು? ನಿಯೋದ ಮ್ಯಾನೇಜರ್‌ಗೂ ಇದು ಕಷ್ಟ ಅನಿಸಿದಂತಾಯಿತು. ಅವರು ಬೆರಗಾಗಿ ನಿಂತರು. ಅವರ ಜೊತೆ ಲಾರಿಯಲ್ಲಿ ಬಂದ ಕೆಲಸದವರಿಗೂ ಇದು ಅಸಾಧ್ಯವಾಗಿ ಕಂಡ ಹಾಗಾಯಿತು.

ಪ್ರಭಾಕರ ಸಂಜಯನ ಕ್ಯಾಮೆರಾಕ್ಕೆ ಅಂಟಿಕೊಂಡಿದ್ದ. ಯಾವ ಕ್ಷಣವನ್ನೂ ತಪ್ಪಿಸಲಿಕ್ಕೆ ಬಾರದು ಅಂತ ಸಂಜಯ್ ಅವನಿಗೆ ಹೇಳಿದ್ದ.

ನೋಡನೋಡುತ್ತಿದ್ದಂತೆ ಸೀತಾಪುರದ ಯುವಕರು ಲಾರಿಯಿಂದ ಕಬ್ಬಿಣದ ಕಂಬಗಳನ್ನು ಇಳಿಸತೊಡಗಿದರು. ಆಮೇಲೆ ಅದಕ್ಕೆ ಬಿಗಿಯಾಗಿ ಹಗ್ಗಗಳನ್ನು ಕಟ್ಟಿದರು. ಕಬ್ಬಿಣದ ಕಂಬಗಳನ್ನು ಉರುಳಿಸಿಕೊಂಡು ಹೋಗಲಿಕ್ಕೆ ಮರದ ತುಂಡುಗಳನ್ನು ಒಂದೊಂದಾಗಿ ತಂದರು. ಕಬ್ಬಿಣದ ಕಂಬಗಳನ್ನು ಮೊದಲಿಗೆ ಮರದ ದಿಮ್ಮಿಗಳ ಮೇಲೆ ಎತ್ತಿ ಮಲಗಿಸಲಾಯಿತು. ನಂತರ ಕಬ್ಬಿಣದ ಕಂಬವನ್ನು ಎಳೆದಾಗ ಅದು ಮರದ ದಿಮ್ಮಿಗಳ ಮೇಲೆ ಉರುಳಿ ಸುಲಭವಾಗಿ ಮುಂದೆ ಮುಂದೆ ಹೋಯಿತು. ಇದೇ ಉಪಾಯ ಉಪಯೋಗಿಸಿ ಹುಡುಗರು ಒಂದೊಂದೇ ಕಬ್ಬಿಣದ ಕಂಬವನ್ನು ಗುಡ್ಡದ ಕಡೆಗೆ ಎಳೆದರು. ಕೆಲವು ಹುಡುಗರು ಮುಂದೆ ಹೋಗಿ ದಾರಿಗೆ ಅಡ್ಡ ಬರುತ್ತಿದ್ದ ಗಿಡ ಮರ ಕೊಂಬೆಗಳನ್ನು ಕತ್ತರಿಸುತ್ತಿದ್ದರು. ಮರದ ದಿಣ್ಣೆಗಳನ್ನು ಹಾಕುತ್ತಿದ್ದರು. ಹಾಗೂ ಹೀಗೂ ಒಂದೊಂದೇ ಕಬ್ಬಿಣದ ಕಂಬ ಗುಡ್ಡ ಏರಲು ಮೊದಲಾಯ್ತು. ಎಲ್ಲಾ ಕಂಬಗಳೂ ಗುಡ್ಡದ ಅರ್ಧ ಏರುವಾಗ ಸೂರ್ಯ ಮುಳುಗುವುದರಲ್ಲಿದ್ದ.

ಯುವಕರು ಕಾಟೇಜ್‌ಗೆ ಬೇಕಾದ ವಸ್ತುಗಳನ್ನು ಒಂದೊಂದಾಗಿ ಹೆಗಲ ಮೇಲೆ ಇರಿಸಿಕೊಂಡು ಶೆಟ್ಟರ ಮನೆಯ ಕಡೆಗೆ ನಡೆದರು.

ಮ್ಯಾನೇಜರ್ ಮತ್ತು ಕಂಬ ನೆಡುವವರು ಮತ್ತು ಟೆಕ್ನಿಷಿಯನ್‌ಗಳು ಸೀತಾಪುರದಲ್ಲೇ ಉಳಿಯಲು ನಿರ್ಧರಿಸಿದರು. ಶೆಟ್ಟರು ಮತ್ತು ಆನಂದಣ್ಣ ಚರ್ಚಿಸಿ ಆ ಮಂದಿಯನ್ನು ಶೆಟ್ಟರ ಮನೆಗೇ ಕರೆದೊಯ್ಯುವ ನಿರ್ಧಾರ ಮಾಡಿದರು.

ಮರುದಿನ ಸೂರ್ಯೋದಯದ ಸುಮಾರಿಗೆ ಸೀತಾಪುರದ ಯುವಕರು ಹಿಂದಿನ ದಿನ ಮಾಡಿದ ಕೆಲಸವನ್ನೇ ಮುಂದುವರಿಸಿದರು. ಇಡೀ ಊರಿಗೆ ಊರೇ ಈ ಕೆಲಸದಲ್ಲಿ ಕೈ ಜೋಡಿಸಿತು. ಮಧ್ಯಾಹ್ನದ ವೇಳೆಗೆ ಎಲ್ಲಾ ಕಂಬಗಳೂ ಗುಡ್ಡದ ತುದಿ ಸೇರಿದವು. ನಿಯೋದ ಕೆಲಸದವರು ಕಂಬಗಳನ್ನು ಜೋಡಿಸಿ ಟವರ್ ಮಾಡಲು ಪ್ರಾರಂಭಿಸಿದರು. ಎಲ್ಲೆಲ್ಲೂ ಉಲ್ಲಾಸದ ಮಾತುಗಳು ತುಂಬತೊಡಗಿದವು.

ಸಂಜಯ್ ಪ್ರಭಾಕರನ ಜೊತೆ ಗುಡ್ಡದ ಕಲ್ಲಿನ ಮೇಲೆ ಹೋದ. ಅಲ್ಲಿ ಆಗಲೇ ಟವರ್ ಅನ್ನು ಜೋಡಿಸಹತ್ತಿದ್ದರು. ಟೆಕ್ನಿಷಿಯನ್‌ಗಳು ನಿಯೋ ಸಿಗ್ನಲ್ಲಿಗೆ ಬೇಕಾದ ವಸ್ತುಗಳನ್ನು ಜೋಡಿಸುತ್ತಿದ್ದರು. ಅದನ್ನೆಲ್ಲಾ ಪ್ರಭಾಕರನ ವಿಡಿಯೊದಲ್ಲಿ ಸೆರೆಹಿಡಿಯಲಾಯ್ತು. ಸಂಜಯ್ ಎರಡು ದಿನದ ಎಲ್ಲಾ ವಿಡಿಯೊಗಳನ್ನು ಅಪ್‌ಲೋಡ್ ಮಾಡಿದ. ಫೋನ್ ಕಾಲ್ ಮುಗಿಸಿ ಸೂರ್ಯ ಮುಳುಗುವ ವೇಳೆಗೆ ಪ್ರಭಾಕರನ ಜೊತೆ ಸೀತಾಪುರದ ಕಡೆಗೆ